# 93/26 – K

**Question Booklet Sl. No.**

**Question Booklet Alpha Code**

**A**

A

| **Total Number of Questions : 100** | **Time : 90 Minutes** |
|---|---|
| | **Maximum Marks : 100** |

## INSTRUCTIONS TO CANDIDATES

1. The Question Paper will be given in the form of a Question Booklet. There will be four versions of Question Booklets with Question Booklet Alpha Code viz. **A, B, C** & **D**.
2. The Question Booklet Alpha Code will be printed on the top left margin of the facing sheet of the Question Booklet.
3. The Question Booklet Alpha Code allotted to you will be noted in your seating position in the Examination Hall.
4. If you get a Question Booklet where the alpha code does not match to the allotted Alpha Code in the seating position, please draw the attention of the Invigilator IMMEDIATELY.
5. The Question Booklet Serial Number is printed on the top right margin of the facing sheet. If your Question Booklet is un-numbered, please get it replaced by new Question Booklet with same Alpha Code.
6. The Question Booklet will be sealed at the middle of the right margin. Candidate should not open the Question Booklet, until the indication is given to start answering.
7. Immediately after the commencement of the examination, the candidate should check that the Question Booklet supplied to him/her contains all the 100 questions in serial order. The Question Booklet does not have unprinted or torn or missing pages and if so he/she should bring it to the notice of the Invigilator and get it replaced by a complete booklet with same Alpha Code. This is most important.
8. **Question Serial No. 1 to 80 are printed both in English and in Kannada. Doubts regarding the meaning and translation of Question Serial No. 1 to 80 will be settled based on the Questions in English.**
9. Two blank pages are provided before the last page of this Question Paper for rough work.
10. **Please read carefully all the instructions on the reverse of the Answer Sheet before marking your answers.**
11. Each question is provided with four choices **(A), (B), (C)** and **(D)** having one correct answer. Choose the correct answer and darken the bubble corresponding to the question number using Blue or Black Ball Point Pen in the OMR Answer Sheet.
12. **Each correct answer carries 1 mark and for each wrong answer 1/3 mark will be deducted. No negative mark for unattended questions.**
13. No candidate will be allowed to leave the examination hall till the end of the session and without handing over his/her Answer Sheet to the Invigilator. Candidates should ensure that the Invigilator has verified all the entries in the Register Number Coding Sheet and that the Invigilator has affixed his/her signature in the space provided.
14. Strict compliance of instructions is essential. Any malpractice or attempt to commit any kind of malpractice in the Examination will result in the disqualification of the candidate.

A

1. Consider the following statements regarding administrative reforms of Marthanda Varma in Travancore.
   1. Marthanda Varma introduced the annual budget called the 'Pativukanakku'.
   2. The title of Chempaka Raman was conferred upon the officials for their meritorious service.
   3. Marthanda Varma built the famous Nadum Kotta on the borders of Thiruvithamkur to prevent the ensuring attack of the Mysoreans.
   4. Mavelikara was made the headquarters of the commercial department.

   Which of the statements given above are correct ?

   A) 1, 2 and 3 B) 1, 2 and 4
   C) 1, 3 and 4 D) All the above

2. Match List – I with List – II and select the correct answer by using the codes given below.

| List – I | List – II |
|---|---|
| 1. Stroming of the Bastille prison | a. June, 1789 |
| 2. Oath of the Tennis Court | b. July, 1789 |
| 3. The Declaration of the Rights of Man, and of the Citizen | c. January, 1793 |
| 4. Execution of Louis XVI | d. August, 1789 |

   A) 1-a, 2-b, 3-c, 4-d B) 1-b, 2-c, 3-d, 4-a
   C) 1-b, 2-a, 3-d, 4-c D) 1-a, 2-d, 3-b, 4-c

3. Arrange the following events regarding Aikya Kerala movement as per its chronological order.
   a. Aikya Kerala Conference held at Thrissur
   b. Payyannur Political Conference
   c. Travancore Cochin Integration
   d. Formation of Kerala State

   A) a, b, c, d B) a, c, b, d C) b, a, d, c D) b, a, c, d

4. Match List – I with List – II and select the correct answer by using the codes given below.

| List – I (Congress Presidents) | List – II (Congress Session) |
|---|---|
| 1. C. Sankaran Nair | a. Amaravati |
| 2. C. Vijayaraghavachariar | b. Bombay |
| 3. Gopala Krishna Gokhale | c. Banares |
| 4. Dr. Rajendra Prasad | d. Nagpur |

   A) 1-a, 2-b, 3-c, 4-d B) 1-a, 2-d, 3-c, 4-b
   C) 1-a, 2-c, 3-d, 4-b D) 1-a, 2-c, 3-b, 4-d

1. ತಿರುವಾಂಕೂರಿನ ಮಾರ್ತಾಂಡ ವರ್ಮನ ಆಡಳಿತಾತ್ಮಕ ಸುಧಾರಣೆಗಳಿಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.
   1. ಮಾರ್ತಾಂಡ ವರ್ಮನು 'ಪತಿವುಕನಕ್ಕು' ಎಂಬ ವಾರ್ಷಿಕ ಬಜೆಟ್ ಅನ್ನು ಪರಿಚಯಿಸಿದನು.
   2. ಅಧಿಕಾರಿಗಳ ಶ್ಲಾಘನೀಯ ಸೇವೆಗಾಗಿ ಅವರಿಗೆ ಚೆಂಪಕ ರಾಮನ್ ಎಂಬ ಬಿರುದನ್ನು ನೀಡಲಾಗುತ್ತಿತ್ತು.
   3. ಮೈಸೂರಿಗರ ದಾಳಿಯನ್ನು ತಡೆಯಲು ಮಾರ್ತಾಂಡ ವರ್ಮನು ತಿರುವಾಂಕೂರಿನ ಗಡಿಯಲ್ಲಿ ಪ್ರಸಿದ್ಧವಾದ ನಡುಂ ಕೋಟೆಯನ್ನು ನಿರ್ಮಿಸಿದನು.
   4. ಮಾವೇಲಿಕರವನ್ನು ವಾಣಿಜ್ಯ ಇಲಾಖೆಯ ಪ್ರಧಾನ ಕಚೇರಿಯನ್ನಾಗಿ ಮಾಡಲಾಯಿತು.

   ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

   A) 1, 2 ಮತ್ತು 3 B) 1, 2 ಮತ್ತು 4
   C) 1, 3 ಮತ್ತು 4 D) ಮೇಲಿನ ಎಲ್ಲವೂ

2. ಪಟ್ಟಿ – I ಅನ್ನು ಪಟ್ಟಿ – IIರೊಂದಿಗೆ ಹೊಂದಿಸಿ ಮತ್ತು ಕೆಳಗೆ ನೀಡಲಾದ ಸಂಕೇತಗಳನ್ನು (ಕೋಡ್‌ಗಳನ್ನು) ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| **ಪಟ್ಟಿ – I** | **ಪಟ್ಟಿ – II** |
|---|---|
| 1. ಬ್ಯಾಸ್ಟೈಲ್ ಜೈಲಿನ ಮೇಲಿನ ದಾಳಿ | a. ಜೂನ್,1789 |
| 2. ಟೆನ್ನಿಸ್ ಕೋರ್ಟ್‌ನ ಪ್ರತಿಜ್ಞೆ | b. ಜುಲೈ, 1789 |
| 3. ಮಾನವ ಮತ್ತು ಪ್ರಜೆಯ ಹಕ್ಕುಗಳ ಘೋಷಣೆ | c. ಜನವರಿ, 1793 |
| 4. 16ನೇ ಲೂಯಿಯ ಮರಣದಂಡನೆ | d. ಆಗಸ್ಟ್, 1789 |

   A) 1-a, 2-b, 3-c, 4-d B) 1-b, 2-c, 3-d, 4-a
   C) 1-b, 2-a, 3-d, 4-c D) 1-a, 2-d, 3-b, 4-c

3. ಐಕ್ಯ ಕೇರಳ ಚಳವಳಿಯ ಘಟನೆಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಿ.
   a. ತ್ರಿಶ್ಶೂರ್‌ನಲ್ಲಿ ನಡೆದ ಐಕ್ಯ ಕೇರಳ ಸಮ್ಮೇಳನ
   b. ಪಯ್ಯನ್ನೂರು ರಾಜಕೀಯ ಸಮ್ಮೇಳನ
   c. ತಿರುವಾಂಕೂರ್ ಕೊಚ್ಚಿ ವಿಲೀನ
   d. ಕೇರಳ ರಾಜ್ಯದ ಸ್ಥಾಪನೆ

   A) a, b, c, d B) a, c, b, d C) b, a, d, c D) b, a, c, d

4. ಪಟ್ಟಿ – I ಅನ್ನು ಪಟ್ಟಿ – IIರೊಂದಿಗೆ ಹೊಂದಿಸಿ ಮತ್ತು ಕೆಳಗೆ ನೀಡಲಾದ ಸಂಕೇತಗಳನ್ನು (ಕೋಡ್‌ಗಳನ್ನು) ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| **ಪಟ್ಟಿ – I (ಕಾಂಗ್ರೆಸ್ ಅಧ್ಯಕ್ಷರು)** | **ಪಟ್ಟಿ – II (ಕಾಂಗ್ರೆಸ್ ಅಧಿವೇಶನ)** |
|---|---|
| 1. ಸಿ. ಶಂಕರನ್ ನಾಯರ್ | a. ಅಮರಾವತಿ |
| 2. ಸಿ. ವಿಜಯರಾಘವಾಚಾರಿಯಾರ್ | b. ಬಾಂಬೆ |
| 3. ಗೋಪಾಲಕೃಷ್ಣ ಗೋಖಲೆ | c. ಬನಾರಸ್ |
| 4. ಡಾ. ರಾಜೇಂದ್ರ ಪ್ರಸಾದ್ | d. ನಾಗ್ಪುರ |

   A) 1-a, 2-b, 3-c, 4-d B) 1-a, 2-d, 3-c, 4-b
   C) 1-a, 2-c, 3-d, 4-b D) 1-a, 2-c, 3-b, 4-d

5. Match List – I with List – II and select the correct answer by using the codes given below.

| List – I (News Papers) | List – II (Founders) |
|---|---|
| 1. The Hindu | a. G. Subramaniya Iyer |
| 2. Amrita Bazar Patrika | b. Sisir Kumar Ghosh |
| 3. Bombay Chronicle | c. Annie Besant |
| 4. New India | d. Pherozeshah Mehta |

A) 1-a, 2-b, 3-c, 4-d
B) 1-a, 2-b, 3-d, 4-c
C) 1-b, 2-a, 3-d, 4-c
D) 1-b, 2-c, 3-d, 4-a

6. Consider the following statements regarding the $18^{th}$ BRICS Summit.

   1. The theme of summit is strengthening Global South cooperation for a more inclusive and sustainable governance.
   2. The summit was held at Bharat Mandapam in New Delhi.
   3. The BRICS members unanimously adopted the New Delhi declaration.
   4. Brazil President Luiz Inacio Lula da Silva represented Brazil in the summit.

   Which of the statements given above are correct ?

   A) 1 and 2 B) 1 and 3 C) 2 and 3 D) 3 and 4

7. Which layer of the atmosphere is generally absent or disappears during the night due to the absence of solar radiation ?

   A) Troposphere
   B) Ionosphere
   C) Stratosphere
   D) Mesosphere

8. Which of the following statements regarding a recumbent fold is/are correct ?

   i. The axial plane of a recumbent fold is approximately horizontal.
   ii. The limbs of a recumbent fold are commonly nearly parallel to the axial plane.
   iii. Recumbent folds are generally associated with intense compressional deformation.
   iv. A recumbent fold necessarily has a vertical axial plane.

   A) i and ii only
   B) i, ii and iii only
   C) ii, iii and iv only
   D) All of the above

9. Which of the following is/are a non-topological vector data model in GIS ?

   i. SPAGHETTI
   ii. GBF/DIME
   iii. TIGER
   iv. POLYVERT

   A) i and ii B) iii and iv C) iv only D) i only

5. ಪಟ್ಟಿ – I ಅನ್ನು ಪಟ್ಟಿ – IIರೊಂದಿಗೆ ಹೊಂದಿಸಿ ಮತ್ತು ಕೆಳಗೆ ನೀಡಲಾದ ಸಂಕೇತಗಳನ್ನು (ಕೋಡ್‌ಗಳನ್ನು) ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| **ಪಟ್ಟಿ – I (ವೃತ್ತಪತ್ರಿಕೆಗಳು)** | **ಪಟ್ಟಿ – II (ಸ್ಥಾಪಕರು)** |
|---|---|
| 1. ದಿ ಹಿಂದೂ | a. ಜಿ. ಸುಬ್ರಮಣ್ಯ ಅಯ್ಯರ್ |
| 2. ಅಮೃತ ಬಜಾರ್ ಪತ್ರಿಕಾ | b. ಸಿಸಿರ್ ಕುಮಾರ್ ಘೋಷ್ |
| 3. ಬಾಂಬೆ ಕ್ರಾನಿಕಲ್ | c. ಆನಿ ಬೆಸೆಂಟ್ |
| 4. ನ್ಯೂ ಇಂಡಿಯಾ | d. ಫಿರೋಜ್‌ಶಾ ಮೆಹ್ತಾ |

A) 1-a, 2-b, 3-c, 4-d
B) 1-a, 2-b, 3-d, 4-c
C) 1-b, 2-a, 3-d, 4-c
D) 1-b, 2-c, 3-d, 4-a

6. 18ನೇ ಬ್ರಿಕ್ಸ್ ಶೃಂಗಸಭೆಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.
   1. ಹೆಚ್ಚು ಒಳಗೊಳ್ಳುವ ಮತ್ತು ಸುಸ್ಥಿರ ಆಡಳಿತಕ್ಕಾಗಿ ಜಾಗತಿಕ ದಕ್ಷಿಣದ ಸಹಕಾರವನ್ನು ಬಲಪಡಿಸುವುದು ಎಂಬುದು ಶೃಂಗಸಭೆಯ ಪ್ರಮುಖ ವಿಷಯವಾಗಿದೆ.
   2. ಈ ಶೃಂಗಸಭೆಯು ನವದೆಹಲಿಯ ಭಾರತ್ ಮಂಟಪಂನಲ್ಲಿ ನಡೆಯಿತು.
   3. ಬ್ರಿಕ್ಸ್ ಸದಸ್ಯ ರಾಷ್ಟ್ರಗಳು ನವದೆಹಲಿ ಘೋಷಣೆಯನ್ನು ಸರ್ವಾನುಮತದಿಂದ ಅಂಗೀಕರಿಸಿದವು.
   4. ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನಾಸಿಯೊ ಲೂಲಾ ಡಾ ಸಿಲ್ವಾ ಅವರು ಶೃಂಗಸಭೆಯಲ್ಲಿ ಬ್ರೆಜಿಲ್ ಅನ್ನು ಪ್ರತಿನಿಧಿಸಿದರು.

   ಈ ಮೇಲಿನ ಹೇಳಿಕೆಗಳಲ್ಲಿ ಯಾವುದು ಸರಿಯಾಗಿವೆ ?

A) 1 ಮತ್ತು 2   B) 1 ಮತ್ತು 3   C) 2 ಮತ್ತು 3   D) 3 ಮತ್ತು 4

7. ಸೂರ್ಯನ ವಿಕಿರಣದ (ಸೂರ್ಯರಶ್ಮಿ) ಅಭಾವದಿಂದಾಗಿ ರಾತ್ರಿಯ ಸಮಯದಲ್ಲಿ ವಾತಾವರಣದ ಯಾವ ಪದರವು ಸಾಮಾನ್ಯವಾಗಿ ಇಲ್ಲದಂತಾಗುತ್ತದೆ ಅಥವಾ ಕಣ್ಮರೆಯಾಗುತ್ತದೆ ?

A) ಟ್ರೋಪೋಸ್ಫಿಯರ್
B) ಅಯಾನೋಸ್ಫಿಯರ್
C) ಸ್ಟ್ರಾಟೋಸ್ಫಿಯರ್
D) ಮೆಸೊಸ್ಫಿಯರ್

8. ಕೆಳಗಿನ ಹೇಳಿಕೆಗಳಲ್ಲಿ ಮಲಗಿರುವ ಮಡಿಕೆ ಕುರಿತು ಯಾವುದು/ಯಾವುವು ಸರಿ ?
   i. ಮಲಗಿರುವ ಮಡಿಕೆಯ ಅಕ್ಷೀಯ ತಲವು ಸರಿಸುಮಾರು ಅಡ್ಡಲಾಗಿರುತ್ತದೆ.
   ii. ಮಲಗಿರುವ ಮಡಿಕೆಯ ಭುಜಗಳು ಸಾಮಾನ್ಯವಾಗಿ ಅಕ್ಷೀಯ ತಲಕ್ಕೆ ಸಮಾನಾಂತರವಾಗಿರುತ್ತವೆ.
   iii. ಮಲಗಿರುವ ಮಡಿಕೆಗಳು ಸಾಮಾನ್ಯವಾಗಿ ತೀವ್ರವಾದ ಸಂಕೋಚನದ ರೂಪವಿರೂಪತೆಗೆ ಸಂಬಂಧಿಸಿವೆ.
   iv. ಮಲಗಿರುವ ಮಡಿಕೆಯು ಕಡ್ಡಾಯವಾಗಿ ಲಂಬವಾದ ಅಕ್ಷೀಯ ತಲವನ್ನು ಹೊಂದಿರುತ್ತದೆ.

A) i ಮತ್ತು ii ಮಾತ್ರ
B) i, ii ಮತ್ತು iii ಮಾತ್ರ
C) ii, iii ಮತ್ತು iv ಮಾತ್ರ
D) ಮೇಲಿನ ಎಲ್ಲವೂ

9. ಕೆಳಗಿನವುಗಳಲ್ಲಿ ಯಾವುದು GISನಲ್ಲಿ ನಾನ್–ಟೊಪೋಲಾಜಿಕಲ್ (ಟೊಪೋಲಜಿ ರಹಿತ) ವೆಕ್ಟರ್ ಡೇಟಾ ಮಾಡೆಲ್ ಆಗಿದೆ ?
   i. SPAGHETTI
   ii. GBF/DIME
   iii. TIGER
   iv. POLYVERT

A) i ಮತ್ತು ii   B) iii ಮತ್ತು iv   C) iv ಮಾತ್ರ   D) i ಮಾತ್ರ

10. Which of the following is/are an advantage of along-track sensors in remote sensing ?
    i. They provide a longer dwell time over each ground target.
    ii. They generally offer high radiometric resolution and improved geometric accuracy.
    iii. They eliminate the need for calibration of individual detectors.
    iv. They have higher reliability and longer life expectancy.
    A) i, ii and iii only B) ii, iii and iv only
    C) i, ii and iv only D) i, iii and iv only

11. Which of the following statements best describes the uniqueness of urbanisation in Kerala ?
    i. Emergence of an intensive rural-urban interaction zone.
    ii. Increasing coexistence between rural and urban functions.
    iii. Absence of a single primate city.
    iv. High Spatial diffusion of small cities.
    A) i only B) i and ii only
    C) i, ii and iii only D) All of the above

12. Which of the following highlights the primary orbital significance of ISRO’s EOS-05 satellite launched recently ?
    A) India’s first Earth observation satellite operating from Low Earth Orbit with a polar sun-synchronous trajectory.
    B) India’s first Earth observation satellite operating from a high-altitude Geosynchronous Orbit.
    C) India’s first navigation satellite deployed specifically to enhance the NavIC constellation in Medium Earth Orbit.
    D) India’s first micro-satellite designed for deep-space astronomy operating at the Earth-Sun Lagrange Point L1.

13. The Indian Critical Minerals Identification process tries to address which of the following core objectives ?
    i. Supporting economic growth, competitiveness and job creation.
    ii. Geological mapping by the Geological Survey of India.
    iii. Manufacturing and advanced technology production.
    iv. Enhancing global security and partnerships with allies.
    A) Only i and iii B) Only ii and iv
    C) Only i and iv D) Only ii and iii

14. “Sweet Revolution” in India is related to the overall promotion and development of
    A) Sugarcane farming B) Beekeeping
    C) Grapes farming D) Cold chain for fruits

10. ರಿಮೋಟ್ ಸೆನ್ಸಿಂಗ್‌ನಲ್ಲಿ ಅಲಾಂಗ್-ಟ್ರ್ಯಾಕ್ ಸೆನ್ಸಾರ್‌ಗಳ ಪ್ರಯೋಜನಗಳ ಕುರಿತು ಕೆಳಗಿನವುಗಳಲ್ಲಿ ಯಾವುದು/ಯಾವುವು ಸರಿಯಾಗಿದೆ/ವೆ ?
   i. ಇವು ಪ್ರತಿಯೊಂದು ಭೂಲಕ್ಷ್ಯದ ಮೇಲೆ ಹೆಚ್ಚು ಸಮಯವನ್ನು ನೀಡುತ್ತವೆ.
   ii. ಇವು ಸಾಮಾನ್ಯವಾಗಿ ಹೆಚ್ಚಿನ ರೇಡಿಯೋಮೆಟ್ರಿಕ್ ರೆಸಲ್ಯೂಶನ್ ಮತ್ತು ಸುಧಾರಿತ ಜ್ಯಾಮಿತೀಯ ನಿಖರತೆಯನ್ನು ನೀಡುತ್ತವೆ.
   iii. ಇವು ಪ್ರತ್ಯೇಕ ಡಿಟೆಕ್ಟರ್‌ಗಳ ಕ್ಯಾಲಿಬ್ರೇಶನ್ ಅಗತ್ಯವನ್ನು ಸಂಪೂರ್ಣವಾಗಿ ನಿವಾರಿಸುತ್ತವೆ.
   iv. ಇವು ಹೆಚ್ಚಿನ ನಂಬಿಗಸತ್ಯತೆ ಮತ್ತು ಸುದೀರ್ಘ ಆಯುಷ್ಯವನ್ನು ಹೊಂದಿವೆ.
   A) i, ii ಮತ್ತು iii ಮಾತ್ರ
   B) ii, iii ಮತ್ತು iv ಮಾತ್ರ
   C) i, ii ಮತ್ತು iv ಮಾತ್ರ
   D) i, iii ಮತ್ತು iv ಮಾತ್ರ

11. ಕೆಳಗಿನ ಯಾವ ಹೇಳಿಕೆಯು ಕೇರಳದ ನಗರೀಕರಣದ ವಿಶಿಷ್ಟತೆಯನ್ನು ಅತ್ಯುತ್ತಮವಾಗಿ ವಿವರಿಸುತ್ತದೆ ?
   i. ತೀವ್ರವಾದ ಗ್ರಾಮೀಣ-ನಗರ ಸಂವಹನ ವಲಯದ ಹೊರಹೊಮ್ಮುವಿಕೆ.
   ii. ಗ್ರಾಮೀಣ ಮತ್ತು ನಗರ ಕಾರ್ಯಗಳ ನಡುವೆ ಹೆಚ್ಚುತ್ತಿರುವ ಸಹಬಾಳ್ವೆ.
   iii. ಯಾವುದೇ ಒಂದು ಏಕೈಕ ಪ್ರೈಮೇಟ್ ಸಿಟಿ ಇಲ್ಲದಿರುವುದು.
   iv. ಸಣ್ಣ ನಗರಗಳ ಹೆಚ್ಚಿನ ಪ್ರಾದೇಶಿಕ ಪ್ರಸರಣ.
   A) i ಮಾತ್ರ
   B) i ಮತ್ತು ii ಮಾತ್ರ
   C) i, ii ಮತ್ತು iii ಮಾತ್ರ
   D) ಮೇಲಿನ ಎಲ್ಲವೂ

12. ಇತ್ತೀಚೆಗೆ ಉಡಾವಣೆಗೊಂಡ ಇಸ್ರೋದ EOS-05 ಉಪಗ್ರಹದ ಪ್ರಾಥಮಿಕ ಕಕ್ಷೆಯ ಮಹತ್ವವನ್ನು ಕೆಳಗಿನವುಗಳಲ್ಲಿ ಯಾವುದು ಎತ್ತಿಹಿಡಿಯುತ್ತದೆ ?
   A) ಧ್ರುವೀಯ ಸೂರ್ಯ-ಸಮಕಾಲಿಕ ಪಥದೊಂದಿಗೆ ಕೆಳ ಭೂ ಕಕ್ಷೆಯಿಂದ ಕಾರ್ಯನಿರ್ವಹಿಸುವ ಭಾರತದ ಮೊದಲ ಭೂ ವೀಕ್ಷಣಾ ಉಪಗ್ರಹ.
   B) ಎತ್ತರದ ಭೂಸ್ಥಿರ ಕಕ್ಷೆಯಿಂದ (GEO) ಕಾರ್ಯನಿರ್ವಹಿಸುವ ಭಾರತದ ಮೊದಲ ಭೂ ವೀಕ್ಷಣಾ ಉಪಗ್ರಹ.
   C) ಮಧ್ಯಮ ಭೂ ಕಕ್ಷೆಯಲ್ಲಿ ನಾವಿಕ್ ನಕ್ಷತ್ರಪುಂಜವನ್ನು ವರ್ಧಿಸಲು ನಿರ್ದಿಷ್ಟವಾಗಿ ನಿಯೋಜಿಸಲಾದ ಭಾರತದ ಮೊದಲ ನ್ಯಾವಿಗೇಷನ್ ಉಪಗ್ರಹ.
   D) ಅರ್ಥ್-ಸನ್ ಲಗ್ರಾಂಜ್ ಪಾಯಿಂಟ್ L1ನಲ್ಲಿ ಕಾರ್ಯನಿರ್ವಹಿಸುವ, ಬಾಹ್ಯಾಕಾಶ ಖಗೋಳಶಾಸ್ತ್ರಕ್ಕಾಗಿ ವಿನ್ಯಾಸಗೊಳಿಸಲಾದ ಭಾರತದ ಮೊದಲ ಮೈಕ್ರೋ-ಸ್ಯಾಟಲೈಟ್.

13. ಭಾರತದ ನಿರ್ಣಾಯಕ ಖನಿಜಗಳ ಗುರುತಿಸುವಿಕೆ ಪ್ರಕ್ರಿಯೆಯು ಕೆಳಗಿನ ಯಾವ ಪ್ರಮುಖ ಉದ್ದೇಶಗಳನ್ನು ಈಡೇರಿಸಲು ಪ್ರಯತ್ನಿಸುತ್ತದೆ ?
   i. ಆರ್ಥಿಕ ಬೆಳವಣಿಗೆ, ಸ್ಪರ್ಧಾತ್ಮಕತೆ ಮತ್ತು ಉದ್ಯೋಗ ಸೃಷ್ಟಿಗೆ ಬೆಂಬಲ ನೀಡುವುದು.
   ii. ಭಾರತೀಯ ಭೂವಿಜ್ಞಾನ ಸರ್ವೇಕ್ಷಣೆಯಿಂದ (GSI) ಭೂವೈಜ್ಞಾನಿಕ ನಕ್ಷೆ ರಚನೆ.
   iii. ಉತ್ಪಾದನೆ ಮತ್ತು ಸುಧಾರಿತ ತಂತ್ರಜ್ಞಾನದ ಉತ್ಪಾದನೆ.
   iv. ಜಾಗತಿಕ ಭದ್ರತೆ ಮತ್ತು ಮಿತ್ರರಾಷ್ಟ್ರಗಳೊಂದಿಗಿನ ಪಾಲುದಾರಿಕೆಯನ್ನು ಹೆಚ್ಚಿಸುವುದು.
   A) ಕೇವಲ i ಮತ್ತು iii
   B) ಕೇವಲ ii ಮತ್ತು iv
   C) ಕೇವಲ i ಮತ್ತು iv
   D) ಕೇವಲ ii ಮತ್ತು iii

14. ಭಾರತದಲ್ಲಿ ''ಸಿಹಿ ಕ್ರಾಂತಿ'' ಎಂಬುದು ಯಾವುದರ ಸಮಗ್ರ ಉತ್ತೇಜನ ಮತ್ತು ಅಭಿವೃದ್ಧಿಗೆ ಸಂಬಂಧಿಸಿದೆ ?
   A) ಕಬ್ಬು ಬೇಸಾಯ
   B) ಜೇನುಸಾಕಣೆ
   C) ದ್ರಾಕ್ಷಿ ಬೇಸಾಯ
   D) ಹಣ್ಣುಗಳಿಗಾಗಿ ಕೋಲ್ಡ್ ಚೈನ್ (ಶೀತಲ ಸರಪಳಿ)

15. The following table gives the data about the active GST taxpayers in different States.

| Active GST Taxpayers | States |
|---|---|
| 4,49,593 | Kerala |
| 7,20,595 | Bihar |
| 11,23,561 | Karnataka |
| 9,22,127 | Delhi |
| 4,59,107 | Andhra Pradesh |

What is the approximate percentage contribution of Delhi's active GST taxpayers compared to the total active GST taxpayers across all five States combined ?

A) 25.1% B) 30.7% C) 27.4% D) 23.5%

16. NITI TARA is a knowledge product system under the

A) Aspirational Districts Programme B) Champions of Change
C) Aspirational Blocks Programme D) State Support Mission

17. Consider the following statements regarding the Five Year Plans of India.

i. The first plan was based on Harrod-Domar Model.
ii. The fifth plan proposed to achieve removal of poverty and attainment of self-reliance.
iii. The seventh plan focussed on growth with social justice and equality.

Which of the statements given above is/are correct ?

A) Only i B) Only i and ii
C) Only ii and iii D) All of the above (i, ii and iii)

18. Which Country is hosting the G20 Leaders' Summit in December 2026 ?

A) India B) Australia
C) The United States of America D) Brazil

19. Who proposed the Objectives Resolution on 13$^{th}$ December 1946 ?

A) B. R. Ambedkar B) Rajendra Prasad
C) Jawaharlal Nehru D) Sardar Patel

20. Which Constitutional Amendments are primarily responsible for the establishment of Local Self-government Institutions (LSGIs) in Kerala ?

A) 73$^{rd}$ and 74$^{th}$ Amendments B) 42$^{nd}$ and 44$^{th}$ Amendments
C) 73$^{rd}$ and 75$^{th}$ Amendments D) 86$^{th}$ and 91$^{st}$ Amendments

21. Which ideal is not mentioned in the Preamble ?

i. Equality
ii. Liberty
iii. Justice
iv. Adult Suffrage

A) i, ii and iv B) iv only C) iii and iv only D) iii only

15. ಕೆಳಗಿನ ಕೋಷ್ಟಕವು ವಿವಿಧ ರಾಜ್ಯಗಳಲ್ಲಿರುವ ಸಕ್ರಿಯ ಜಿ.ಎಸ್.ಟಿ. (GST) ತೆರಿಗೆದಾರರ ವಿವರವನ್ನು ನೀಡುತ್ತದೆ.

| ಸಕ್ರಿಯ ಜಿ. ಎಸ್. ಟಿ. ತೆರಿಗೆದಾರರು | ರಾಜ್ಯಗಳು |
|---|---|
| 4,49,593 | ಕೇರಳ |
| 7,20,595 | ಬಿಹಾರ |
| 11,23,561 | ಕರ್ನಾಟಕ |
| 9,22,127 | ದೆಹಲಿ |
| 4,59,107 | ಆಂಧ್ರಪ್ರದೇಶ |

ಐದೂ ರಾಜ್ಯಗಳ ಒಟ್ಟು ಸಕ್ರಿಯ ಜಿ.ಎಸ್.ಟಿ. ತೆರಿಗೆದಾರರಿಗೆ ಹೋಲಿಸಿದರೆ ದೆಹಲಿಯ ಸಕ್ರಿಯ ಜಿ.ಎಸ್.ಟಿ. ತೆರಿಗೆದಾರರ ಅಂದಾಜು ಶೇಕಡಾವಾರು ಕೊಡುಗೆ ಎಷ್ಟು ?

A) 25.1% B) 30.7% C) 27.4% D) 23.5%

16. ನೀತಿ ತಾರಾ ಎಂಬುದು ಈ ಕೆಳಗಿನ ಯಾವುದರ ಅಡಿಯಲ್ಲಿರುವ ಜ್ಞಾನ ಉತ್ಪನ್ನ ವ್ಯವಸ್ಥೆಯಾಗಿದೆ ?

A) ಆಕಾಂಕ್ಷೆಯ ಜಿಲ್ಲೆಗಳ ಕಾರ್ಯಕ್ರಮ
B) ಚಾಂಪಿಯನ್ಸ್ ಆಫ್ ಚೇಂಜ್
C) ಆಕಾಂಕ್ಷೆಯ ತಾಲೂಕುಗಳ (ಬ್ಲಾಕ್) ಕಾರ್ಯಕ್ರಮ
D) ರಾಜ್ಯ ಬೆಂಬಲ ಮಿಷನ್

17. ಭಾರತದ ಪಂಚವಾರ್ಷಿಕ ಯೋಜನೆಗಳಿಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

i. ಮೊದಲ ಯೋಜನೆಯು ಹ್ಯಾರೋಡ್–ಡೋಮರ್ ಮಾದರಿಯನ್ನು ಆಧರಿಸಿತ್ತು.
ii. ಐದನೇ ಯೋಜನೆಯು ಬಡತನ ನಿರ್ಮೂಲನೆ ಮತ್ತು ಸ್ವಾವಲಂಬನೆಯನ್ನು ಸಾಧಿಸುವ ಗುರಿಯನ್ನು ಹೊಂದಿತ್ತು.
iii. ಏಳನೇ ಯೋಜನೆಯು ಸಾಮಾಜಿಕ ನ್ಯಾಯ ಮತ್ತು ಸಮಾನತೆಯೊಂದಿಗೆ ಅಭಿವೃದ್ಧಿಗೆ ಒತ್ತು ನೀಡಿತು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ ?

A) ಕೇವಲ i
B) ಕೇವಲ i ಮತ್ತು ii
C) ಕೇವಲ ii ಮತ್ತು iii
D) ಮೇಲಿನ ಎಲ್ಲವೂ (i, ii ಮತ್ತು iii)

18. ಡಿಸೆಂಬರ್ 2026ರಲ್ಲಿ G20 ನಾಯಕರ ಶೃಂಗಸಭೆಯನ್ನು ಯಾವ ದೇಶವು ಆಯೋಜಿಸುತ್ತಿದೆ ?

A) ಭಾರತ
B) ಆಸ್ಟ್ರೇಲಿಯಾ
C) ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ (ಅಮೇರಿಕಾ ಸಂಯುಕ್ತ ಸಂಸ್ಥಾನ)
D) ಬ್ರೆಜಿಲ್

19. ಡಿಸೆಂಬರ್ 13, 1946ರಂದು ಉದ್ದೇಶಗಳ ನಿರ್ಣಯವನ್ನು ಪ್ರಸ್ತಾಪಿಸಿದವರು ಯಾರು ?

A) ಬಿ.ಆರ್. ಅಂಬೇಡ್ಕರ್
B) ರಾಜೇಂದ್ರ ಪ್ರಸಾದ್
C) ಜವಾಹರ್‌ಲಾಲ್ ನೆಹರೂ
D) ಸರ್ದಾರ್ ಪಟೇಲ್

20. ಕೇರಳದಲ್ಲಿ ಸ್ಥಳೀಯ ಸ್ವಾಯತ್ತ ಸರ್ಕಾರಿ ಸಂಸ್ಥೆಗಳ (LSGIs) ಸ್ಥಾಪನೆಗೆ ಮುಖ್ಯವಾಗಿ ಕಾರಣವಾದ ಸಾಂವಿಧಾನಿಕ ತಿದ್ದುಪಡಿಗಳು ಯಾವುವು ?

A) 73ನೇ ಮತ್ತು 74ನೇ ತಿದ್ದುಪಡಿಗಳು
B) 42ನೇ ಮತ್ತು 44ನೇ ತಿದ್ದುಪಡಿಗಳು
C) 73ನೇ ಮತ್ತು 75ನೇ ತಿದ್ದುಪಡಿಗಳು
D) 86ನೇ ಮತ್ತು 91ನೇ ತಿದ್ದುಪಡಿಗಳು

21. ಸಂವಿಧಾನದ ಪ್ರಸ್ತಾವನೆಯಲ್ಲಿ ಕೆಳಗಿನ ಯಾವ ಆದರ್ಶವನ್ನು ಉಲ್ಲೇಖಿಸಲಾಗಿಲ್ಲ ?

i. ಸಮಾನತೆ
ii. ಸ್ವಾತಂತ್ರ್ಯ
iii. ನ್ಯಾಯ
iv. ವಯಸ್ಕರ ಮತದಾನದ ಹಕ್ಕು

A) i, ii ಮತ್ತು iv B) iv ಮಾತ್ರ C) iii ಮತ್ತು iv ಮಾತ್ರ D) iii ಮಾತ್ರ

22. Which writ is issued to inquire into the legality of a person's detention ?
    A) Mandamus B) Certiorari C) Prohibition D) Habeas Corpus

23. Who among the following is the Chairperson of the GST Council ?
    A) Prime Minister
    B) Union Minister of State for Finance
    C) Union Finance Minister
    D) Union Revenue Secretary

24. Which Article declares that the Directive Principles are not enforceable by any court ?
    A) Article 36 B) Article 37 C) Article 38 D) Article 39

25. The State Human Rights Commission, constituted under the Protection of Human Rights Act, 1993, inquires into complaints of violation of human rights by public servants and may recommend that the concerned government or authority grant compensation to the victim or initiate proceedings against the persons responsible. Which of the following best describes the legal character of such a recommendation ?
    A) It is a binding direction that the concerned government or authority is legally bound to implement without exception, exactly like a decree of a civil court.
    B) It creates no legal consequence whatsoever, and the government or authority concerned may disregard it without giving any reasons.
    C) It is a recommendation, and while it carries persuasive and moral authority, it does not, by itself, bind the government or authority, which is required only to inform the Commission of the action taken on it within the prescribed period.
    D) It automatically becomes enforceable as a decree of the High Court once thirty days elapse from the date of the recommendation without a response.

26. Kerala is frequently cited in development studies as an example of achieving high social development indicators such as literacy, life expectancy, and infant mortality reduction at levels comparable to many developed economies, despite a per-capita income historically closer to that of other developing regions. Which of the following best explains why this pattern is significant for the study of governance and public administration ?
    A) It illustrates that sustained public investment in health, education, and social welfare delivery can achieve substantial human development outcomes even without a correspondingly high level of industrial or per-capita income growth.
    B) It shows that social-development indicators are entirely unrelated to any form of State intervention or public policy, and result purely from private economic growth.
    C) It proves that per-capita income is the sole determinant of a State's human development outcomes, and Kerala's case is therefore an unexplained statistical anomaly.
    D) It demonstrates that decentralization of planning has no bearing on social-development outcomes at the State level.

22. ಒಬ್ಬ ವ್ಯಕ್ತಿಯ ಬಂಧನದ ಕಾನೂನುಬದ್ಧತೆಯನ್ನು ವಿಚಾರಣೆ ಮಾಡಲು ಹೊರಡಿಸಲಾಗುವ ರಿಟ್ ಯಾವುದು ?
   A) ಮ್ಯಾಂಡಮಸ್ B) ಸರ್ಷಿಯೊರರಿ C) ಪ್ರೊಹಿಬಿಷನ್ D) ಹೇಬಿಯಸ್ ಕಾರ್ಪಸ್

23. ಕೆಳಗಿನವರಲ್ಲಿ ಜಿ.ಎಸ್.ಟಿ. ಕೌನ್ಸಿಲ್‌ನ ಅಧ್ಯಕ್ಷರು ಯಾರು ?
   A) ಪ್ರಧಾನಮಂತ್ರಿ
   B) ಕೇಂದ್ರ ಹಣಕಾಸು ರಾಜ್ಯ ಸಚಿವರು
   C) ಕೇಂದ್ರ ಹಣಕಾಸು ಸಚಿವರು
   D) ಕೇಂದ್ರ ಕಂದಾಯ ಕಾರ್ಯದರ್ಶಿ

24. ರಾಜ್ಯ ನೀತಿಯ ನಿರ್ದೇಶಕ ತತ್ವಗಳನ್ನು ಯಾವುದೇ ನ್ಯಾಯಾಲಯದ ಮೂಲಕ ಜಾರಿಗೊಳಿಸಲು ಸಾಧ್ಯವಿಲ್ಲ ಎಂದು ಯಾವ ವಿಧಿ ಘೋಷಿಸುತ್ತದೆ ?
   A) ವಿಧಿ 36 B) ವಿಧಿ 37 C) ವಿಧಿ 38 D) ವಿಧಿ 39

25. ಮಾನವ ಹಕ್ಕುಗಳ ರಕ್ಷಣಾ ಕಾಯ್ದೆ, 1993ರ ಅಡಿಯಲ್ಲಿ ರಚಿಸಲಾದ ರಾಜ್ಯ ಮಾನವ ಹಕ್ಕುಗಳ ಆಯೋಗವು, ಸರ್ಕಾರಿ ನೌಕರರಿಂದ ಮಾನವ ಹಕ್ಕುಗಳ ಉಲ್ಲಂಘನೆಯ ಕುರಿತಾದ ದೂರುಗಳನ್ನು ವಿಚಾರಣೆ ಮಾಡುತ್ತದೆ ಮತ್ತು ಸಂತ್ರಸ್ತರಿಗೆ ಪರಿಹಾರವನ್ನು ನೀಡಲು ಅಥವಾ ಜವಾಬ್ದಾರಿಯುತ ವ್ಯಕ್ತಿಗಳ ವಿರುದ್ಧ ಕ್ರಮವನ್ನು ಪ್ರಾರಂಭಿಸಿ ಸಂಬಂಧಪಟ್ಟ ಸರ್ಕಾರ ಅಥವಾ ಅಧಿಕಾರಿಗೆ ಶಿಫಾರಸ್ಸು ಮಾಡಬಹುದು. ಇಂತಹ ಶಿಫಾರಸ್ಸಿನ ಕಾನೂನುಬದ್ಧ ಸ್ವರೂಪವನ್ನು ಕೆಳಗಿನವುಗಳಲ್ಲಿ ಯಾವುದು ಅತ್ಯುತ್ತಮವಾಗಿ ವಿವರಿಸುತ್ತದೆ ?
   A) ಇದು ಒಂದು ಬದ್ಧಕಾರಿ ನಿರ್ದೇಶನವಾಗಿದ್ದು, ಸಿವಿಲ್ ನ್ಯಾಯಾಲಯದ ಡಿಕ್ರಿಯಂತೆ (ಆದೇಶ), ಯಾವುದೇ ವಿನಾಯಿತಿಯಿಲ್ಲದೆ ಅದನ್ನು ಜಾರಿಗೊಳಿಸಲು ಸಂಬಂಧಿಸಿದ ಸರ್ಕಾರ ಅಥವಾ ಪ್ರಾಧಿಕಾರವು ಕಾನೂನುಬದ್ಧವಾಗಿ ಬದ್ಧವಾಗಿರುತ್ತದೆ.
   B) ಇದು ಯಾವುದೇ ಕಾನೂನು ಪರಿಣಾಮವನ್ನು ಉಂಟುಮಾಡುವುದಿಲ್ಲ ಮತ್ತು ಸಂಬಂಧಪಟ್ಟ ಸರ್ಕಾರ ಅಥವಾ ಅಧಿಕಾರಿಯು ಯಾವುದೇ ಕಾರಣವನ್ನು ನೀಡದೆ ಇದನ್ನು ನಿರ್ಲಕ್ಷಿಸಬಹುದು.
   C) ಇದು ಒಂದು ಶಿಫಾರಸ್ಸಾಗಿದ್ದು, ಮನವೊಲಿಸುವ ಮತ್ತು ನೈತಿಕ ಪ್ರಭಾವವನ್ನು ಹೊಂದಿದ್ದರೂ, ಸ್ವತಃ ಸಂಬಂಧಿಸಿದ ಸರ್ಕಾರ ಅಥವಾ ಪ್ರಾಧಿಕಾರದ ಮೇಲೆ ಕಾನೂನುಬದ್ಧ ಬದ್ಧತೆಯನ್ನು ಉಂಟುಮಾಡುವುದಿಲ್ಲ. ಆದರೆ, ನಿಗದಿತ ಅವಧಿಯೊಳಗೆ ಅದರ ಕುರಿತು ಕೈಗೊಂಡ ಕ್ರಮದ ಬಗ್ಗೆ ಆಯೋಗಕ್ಕೆ ಮಾಹಿತಿ ನೀಡುವುದು ಸಂಬಂಧಿಸಿದ ಸರ್ಕಾರ ಅಥವಾ ಪ್ರಾಧಿಕಾರದ ಕರ್ತವ್ಯವಾಗಿರುತ್ತದೆ.
   D) ಶಿಫಾರಸ್ಸಿನ ದಿನಾಂಕದಿಂದ ಮೂವತ್ತು ದಿನಗಳು ಕಳೆದರೂ ಯಾವುದೇ ಪ್ರತಿಕ್ರಿಯೆ ಬಾರದಿದ್ದರೆ, ಅದು ಸ್ವಯಂಚಾಲಿತವಾಗಿ ಉಚ್ಚ ನ್ಯಾಯಾಲಯದ ಡಿಕ್ರಿಯಂತೆ (ಆದೇಶ) ಜಾರಿಗೊಳಿಸಬಹುದಾದ ಆದೇಶವಾಗಿ ಪರಿವರ್ತನೆಯಾಗುತ್ತದೆ.

26. ಕೇರಳವು ಅಭಿವೃದ್ಧಿ ಅಧ್ಯಯನಗಳಲ್ಲಿ ಆಗಾಗ್ಗೆ ಒಂದು ಉದಾಹರಣೆಯಾಗಿ ಉಲ್ಲೇಖಿಸಲ್ಪಡುತ್ತದೆ. ಇತರ ಅಭಿವೃದ್ಧಿಶೀಲ ಪ್ರದೇಶಗಳಿಗಿಂತ ತಲಾ ಆದಾಯವು ಐತಿಹಾಸಿಕವಾಗಿ ಹೋಲಿಕೆಯಾಗುವ ಮಟ್ಟದಲ್ಲಿದ್ದರೂ, ಸಾಕ್ಷರತೆ, ಜೀವಿತಾವಧಿ ಮತ್ತು ಶಿಶು ಮರಣ ಪ್ರಮಾಣದಲ್ಲಿನ ಇಳಿಕೆಯಂತಹ ಉನ್ನತ ಸಾಮಾಜಿಕ ಅಭಿವೃದ್ಧಿ ಸೂಚಕಗಳನ್ನು, ಅನೇಕ ಅಭಿವೃದ್ಧಿ ಹೊಂದಿದ ಆರ್ಥಿಕತೆಗಳಿಗೆ ಹೋಲಿಸಬಹುದಾದ ಮಟ್ಟದಲ್ಲಿ ಸಾಧಿಸಿದೆ. ಆಡಳಿತ ಮತ್ತು ಸಾರ್ವಜನಿಕ ಆಡಳಿತದ ಅಧ್ಯಯನಕ್ಕೆ ಈ ಮಾದರಿಯು ಏಕೆ ಮಹತ್ವದ್ದಾಗಿದೆ ಎಂಬುದನ್ನು ಕೆಳಗಿನವುಗಳಲ್ಲಿ ಯಾವುದು ಅತ್ಯುತ್ತಮವಾಗಿ ವಿವರಿಸುತ್ತದೆ ?
   A) ಕೈಗಾರಿಕಾ ಅಥವಾ ತಲಾವಾರು ಆದಾಯದ ಮಟ್ಟವು ಹೆಚ್ಚಿಲ್ಲದಿದ್ದರೂ ಸಹ, ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಕಲ್ಯಾಣ ವಿತರಣೆಯಲ್ಲಿ ನಿರಂತರ ಸಾರ್ವಜನಿಕ ಹೂಡಿಕೆಯನ್ನು ಮಾಡುವ ಮೂಲಕ ಗಣನೀಯ ಮಾನವ ಅಭಿವೃದ್ಧಿಯ ಫಲಿತಾಂಶಗಳನ್ನು ಸಾಧಿಸಬಹುದು ಎಂಬುದನ್ನು ಇದು ನಿರೂಪಿಸುತ್ತದೆ.
   B) ಉನ್ನತ ಮಟ್ಟದ ಮಾನವ ಅಭಿವೃದ್ಧಿ ಸೂಚ್ಯಂಕಗಳು ರಾಜ್ಯದ ಸಾರ್ವಜನಿಕ ನೀತಿ ಅಥವಾ ಸರ್ಕಾರದ ಹಸ್ತಕ್ಷೇಪವಿಲ್ಲದೆ, ಕೇವಲ ಖಾಸಗಿ ಆರ್ಥಿಕ ಬೆಳವಣಿಗೆಯಿಂದ ಮಾತ್ರ ಸಾಧಿಸಲ್ಪಟ್ಟಿವೆ ಎಂಬುದನ್ನು ಇದು ತೋರಿಸುತ್ತದೆ.
   C) ರಾಜ್ಯದ ಮಾನವ ಅಭಿವೃದ್ಧಿ ಫಲಿತಾಂಶಗಳ ಏಕೈಕ ನಿರ್ಧಾರಕ ತಲಾ ಆದಾಯವೇ ಎಂಬುದನ್ನು ಇದು ಸಾಬೀತುಪಡಿಸುತ್ತದೆ. ಆದ್ದರಿಂದ, ಕೇರಳದ ಪ್ರಕರಣವು ವಿವರಿಸಲಾಗದ ಅಂಕಿಅಂಶಗಳ ಅಪವಾದವಾಗಿದೆ.
   D) ವಿಕೇಂದ್ರೀಕೃತ ಯೋಜನೆಯು, ರಾಜ್ಯ ಮಟ್ಟದ ಸಾಮಾಜಿಕ–ಅಭಿವೃದ್ಧಿ ಫಲಿತಾಂಶಗಳ ಮೇಲೆ ಯಾವುದೇ ಪ್ರಭಾವವನ್ನು ಬೀರುವುದಿಲ್ಲ ಎಂಬುದನ್ನು ಇದು ಪ್ರದರ್ಶಿಸುತ್ತದೆ.

27. In 2015, the Planning Commission of India was replaced at the Union level by NITI Aayog, a policy think-tank without the power to allocate plan funds to States. In this changed context, which of the following best describes the continuing role of a body such as the Kerala State Planning Board ?
   A) The Kerala State Planning Board automatically ceased to exist once the Union Planning Commission was replaced, since State Planning Boards derived their authority solely from the Planning Commission.
   B) The Kerala State Planning Board was converted by a Constitutional Amendment into a third chamber of the State Legislature with powers to enact plan-related legislation.
   C) The Kerala State Planning Board's functions were transferred entirely to the Union Ministry of Finance following the replacement of the Planning Commission.
   D) The Kerala State Planning Board continues to function as a State-level advisory body assisting in the formulation of the State's development plans and allocation of the State's own plan outlay, independent of the Union Planning Commission's abolition.

28. Kerala, like several other States, has instituted a single-window clearance mechanism for industrial and investment approvals. Which of the following best explains the primary administrative rationale for adopting a single-window mechanism, as opposed to requiring an investor to approach each regulatory department separately ?
   A) To eliminate the need for any regulatory scrutiny of investment proposals altogether.
   B) To reduce procedural delay and duplication by coordinating and time-bound processing of the multiple statutory approvals required from different departments through one integrated interface, without removing the underlying departmental scrutiny.
   C) To transfer the power to grant statutory clearances from the concerned regulatory departments to a single private company.
   D) To ensure that only investment proposals from a particular sector of the economy are cleared, while all other sectors are permanently excluded.

29. Integrated Watershed Management Programmes in India, including those implemented through Panchayati Raj Institutions in Kerala, are generally designed around a 'ridge-to-valley' treatment sequence combined with participatory planning involving the local community through the Gram Sabha. Which of the following best explains the administrative rationale for beginning treatment works at the ridge (upper reaches) rather than at the valley (lower reaches) of a watershed ?
   A) Because treating soil and water conservation measures first at the higher elevations reduces the velocity of run-off and soil erosion flowing downward, thereby protecting the conservation works subsequently undertaken in the lower reaches.
   B) Because land at the ridge is always government-owned, while land in the valley is always privately owned, making ridge treatment administratively simpler.
   C) Because the ridge area always has a higher population density, so treating it first benefits a larger number of people.
   D) Because Central funding under watershed programmes is released only for ridge-area works, and valley-area works must be funded entirely by the State Government.

27. 2015ರಲ್ಲಿ, ಕೇಂದ್ರ ಮಟ್ಟದಲ್ಲಿ ಭಾರತದ ಯೋಜನಾ ಆಯೋಗದ ಸ್ಥಾನವನ್ನು ನೀತಿ ಆಯೋಗವು ಪಡೆಯಿತು, ಇದು ರಾಜ್ಯಗಳಿಗೆ ಯೋಜನಾ ನಿಧಿಯನ್ನು ಹಂಚಿಕೆ ಮಾಡುವ ಅಧಿಕಾರವನ್ನು ಹೊಂದಿರದ ಒಂದು ನೀತಿ–ಚಿಂತನಾ ವೇದಿಕೆಯಾಗಿದೆ. ಈ ಬದಲಾದ ಸನ್ನಿವೇಶದಲ್ಲಿ, ಕೇರಳ ರಾಜ್ಯ ಯೋಜನಾ ಮಂಡಳಿಯಂತಹ ಸಂಸ್ಥೆಯು ಮುಂದುವರಿಸಿಕೊಂಡು ಹೋಗುತ್ತಿರುವ ಪಾತ್ರವನ್ನು ಈ ಕೆಳಗಿನವುಗಳಲ್ಲಿ ಯಾವುದು ಅತ್ಯುತ್ತಮವಾಗಿ ವಿವರಿಸುತ್ತದೆ ?

A) ಕೇಂದ್ರ ಯೋಜನಾ ಆಯೋಗವನ್ನು ಬದಲಾಯಿಸಿದ ಕೂಡಲೇ ಕೇರಳ ರಾಜ್ಯ ಯೋಜನಾ ಮಂಡಳಿಯು ತನ್ನ ಅಸ್ತಿತ್ವವನ್ನು ಕಳೆದುಕೊಂಡಿತ್ತು, ಏಕೆಂದರೆ ರಾಜ್ಯ ಯೋಜನಾ ಮಂಡಳಿಗಳು ತಮ್ಮ ಅಧಿಕಾರವನ್ನು ಕೇವಲ ಯೋಜನಾ ಆಯೋಗದಿಂದಲೇ ಪಡೆಯುತ್ತಿದ್ದವು.

B) ಕೇರಳ ರಾಜ್ಯ ಯೋಜನಾ ಮಂಡಳಿಯನ್ನು ಸಂವಿಧಾನದ ತಿದ್ದುಪಡಿಯ ಮೂಲಕ ರಾಜ್ಯ ಶಾಸಕಾಂಗದ ಮೂರನೇ ಸದನವಾಗಿ ಪರಿವರ್ತಿಸಲಾಯಿತು ಮತ್ತು ಯೋಜನೆಗೆ ಸಂಬಂಧಿಸಿದ ಶಾಸನಗಳನ್ನು ರೂಪಿಸುವ ಅಧಿಕಾರವನ್ನು ನೀಡಲಾಯಿತು.

C) ಯೋಜನಾ ಆಯೋಗದ ಬದಲಾವಣೆಯ ನಂತರ ಕೇರಳ ರಾಜ್ಯ ಯೋಜನಾ ಮಂಡಳಿಯ ಕಾರ್ಯಗಳನ್ನು ಸಂಪೂರ್ಣವಾಗಿ ಕೇಂದ್ರ ಹಣಕಾಸು ಸಚಿವಾಲಯಕ್ಕೆ ವರ್ಗಾಯಿಸಲಾಯಿತು.

D) ಕೇಂದ್ರ ಯೋಜನಾ ಆಯೋಗದ ರದ್ದತಿಯ ಹೊರತಾಗಿಯೂ, ಕೇರಳ ರಾಜ್ಯ ಯೋಜನಾ ಮಂಡಳಿಯು ರಾಜ್ಯದ ಅಭಿವೃದ್ಧಿ ಯೋಜನೆಗಳ ರಚನೆ ಮತ್ತು ರಾಜ್ಯದ ಸ್ವಂತ ಯೋಜನಾ ವೆಚ್ಚದ ಹಂಚಿಕೆಯಲ್ಲಿ ಸಹಾಯ ಮಾಡುವ ರಾಜ್ಯ ಮಟ್ಟದ ಸಲಹಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದನ್ನು ಮುಂದುವರೆಸಿದೆ.

28. ಇತರ ಹಲವು ರಾಜ್ಯಗಳಂತೆ ಕೇರಳವು ಕೈಗಾರಿಕಾ ಮತ್ತು ಹೂಡಿಕೆ ಅನುಮೋದನೆಗಳಿಗಾಗಿ ಏಕ–ಗವಾಕ್ಷಿ ಅನುಮತಿ ಕಾರ್ಯವಿಧಾನವನ್ನು ಸ್ಥಾಪಿಸಿದೆ. ಹೂಡಿಕೆದಾರರು ಪ್ರತಿಯೊಂದು ನಿಯಂತ್ರಕ ಇಲಾಖೆಯನ್ನು ಪ್ರತ್ಯೇಕವಾಗಿ ಸಂಪರ್ಕಿಸುವ ಅಗತ್ಯಕ್ಕೆ ವಿರುದ್ಧವಾಗಿ, ಏಕ–ಗವಾಕ್ಷಿ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳಲು ಪ್ರಾಥಮಿಕ ಆಡಳಿತಾತ್ಮಕ ತಾರ್ಕಿಕತೆಯನ್ನು ಈ ಕೆಳಗಿನವುಗಳಲ್ಲಿ ಯಾವುದು ಉತ್ತಮವಾಗಿ ವಿವರಿಸುತ್ತದೆ ?

A) ಹೂಡಿಕೆ ಪ್ರಸ್ತಾವನೆಗಳ ಯಾವುದೇ ನಿಯಂತ್ರಕ ಪರಿಶೀಲನೆಯ ಅಗತ್ಯವನ್ನು ಸಂಪೂರ್ಣವಾಗಿ ತೆಗೆದುಹಾಕಲು.

B) ಆಧಾರವಾಗಿರುವ ಇಲಾಖಾ ಪರಿಶೀಲನೆಯನ್ನು ತೆಗೆದುಹಾಕದೆ, ಒಂದು ಸಂಯೋಜಿತ ಇಂಟರ್ಫೇಸ್ ಮೂಲಕ ವಿವಿಧ ಇಲಾಖೆಗಳಿಂದ ಅಗತ್ಯವಿರುವ ಬಹು ಶಾಸನಬದ್ಧ ಅನುಮೋದನೆಗಳ ಸಮನ್ವಯ ಮತ್ತು ಸಮಯಬದ್ಧ ಪ್ರಕ್ರಿಯೆಯ ಮೂಲಕ ಕಾರ್ಯವಿಧಾನದ ವಿಳಂಬ ಮತ್ತು ನಕಲು ಕಡಿಮೆ ಮಾಡಲು.

C) ಶಾಸನಬದ್ಧ ಮಂಜೂರಾತಿಗಳನ್ನು ನೀಡುವ ಅಧಿಕಾರವನ್ನು ಸಂಬಂಧಪಟ್ಟ ನಿಯಂತ್ರಣ ಇಲಾಖೆಗಳಿಂದ ಒಂದು ಖಾಸಗಿ ಕಂಪನಿಗೆ ವರ್ಗಾಯಿಸುವುದು.

D) ಆರ್ಥಿಕತೆಯ ನಿರ್ದಿಷ್ಟ ವಲಯದಿಂದ ಹೂಡಿಕೆ ಪ್ರಸ್ತಾವನೆಗಳನ್ನು ಮಾತ್ರ ತೆರವುಗೊಳಿಸಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಲು, ಆದರೆ ಎಲ್ಲಾ ಇತರ ವಲಯಗಳನ್ನು ಶಾಶ್ವತವಾಗಿ ಹೊರಗಿಡಲಾಗುತ್ತದೆ.

29. ಕೇರಳದ ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾದ ಕಾರ್ಯಕ್ರಮಗಳು ಸೇರಿದಂತೆ ಭಾರತದಲ್ಲಿನ ಸಮಗ್ರ ಜಲಾನಯನ ನಿರ್ವಹಣಾ ಕಾರ್ಯಕ್ರಮಗಳನ್ನು ಸಾಮಾನ್ಯವಾಗಿ 'ಶಿಖರದಿಂದ ಕಣಿವೆಯವರೆಗೆ' ಚಿಕಿತ್ಸಾ ಕ್ರಮಾನುಗತಿಯಲ್ಲಿ ಗ್ರಾಮ ಸಭೆಯ ಮೂಲಕ ಸ್ಥಳೀಯ ಸಮುದಾಯವನ್ನು ಒಳಗೊಂಡ ಪಾಲುದಾರಿಕೆಯ ಯೋಜನೆಯೊಂದಿಗೆ ವಿನ್ಯಾಸಗೊಳಿಸಲಾಗಿದೆ. ಜಲಾನಯನ ಪ್ರದೇಶದ ಕಣಿವೆಯಲ್ಲಿ (ಕೆಳಗಿನ ಭಾಗ) ಕಾಮಗಾರಿಗಳನ್ನು ಪ್ರಾರಂಭಿಸುವುದಕ್ಕಿಂತ ಹೆಚ್ಚಾಗಿ ಶಿಖರದಲ್ಲಿ (ಮೇಲ್ಭಾಗ) ಸಂಸ್ಕರಣಾ ಕಾರ್ಯಗಳನ್ನು ಪ್ರಾರಂಭಿಸಲು ಇರುವ ಆಡಳಿತಾತ್ಮಕ/ ತಾಂತ್ರಿಕ ಕಾರಣವನ್ನು ಕೆಳಗಿನವುಗಳಲ್ಲಿ ಯಾವುದು ಉತ್ತಮವಾಗಿ ವಿವರಿಸುತ್ತದೆ ?

A) ಹೆಚ್ಚಿನ ಎತ್ತರದಲ್ಲಿ (ಮೇಲ್ಭಾಗದಲ್ಲಿ) ಮೊದಲು ಮಣ್ಣು ಮತ್ತು ನೀರು ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳುವುದರಿಂದ ಕೆಳಮುಖವಾಗಿ ಹರಿಯುವ ನೀರಿನ ವೇಗ ಮತ್ತು ಮಣ್ಣಿನ ಸವೆತ ಕಡಿಮೆಯಾಗುತ್ತದೆ, ಇದರಿಂದಾಗಿ ಕೆಳಗಿನ ಪ್ರದೇಶಗಳಲ್ಲಿ ತದನಂತರ ಕೈಗೊಳ್ಳಲಾಗುವ ಸಂರಕ್ಷಣಾ ಕಾಮಗಾರಿಗಳನ್ನು ರಕ್ಷಿಸಿದಂತಾಗುತ್ತದೆ.

B) ಏಕೆಂದರೆ ಬೆಟ್ಟದ ತುದಿಯಲ್ಲಿರುವ ಭೂಮಿಯು ಯಾವಾಗಲೂ ಸರ್ಕಾರದ ಒಡೆತನದಲ್ಲಿರುತ್ತದೆ ಮತ್ತು ಕಣಿವೆಯಲ್ಲಿರುವ ಭೂಮಿಯು ಖಾಸಗಿ ಒಡೆತನದಲ್ಲಿರುತ್ತದೆ, ಹೀಗಾಗಿ ಬೆಟ್ಟದ ತುದಿಯಲ್ಲಿನ ಸಂಸ್ಕರಣಾ ಕಾರ್ಯವು ಆಡಳಿತಾತ್ಮಕವಾಗಿ ಸರಳವಾಗಿರುತ್ತದೆ.

C) ಏಕೆಂದರೆ ಬೆಟ್ಟದ ತುದಿಯ ಪ್ರದೇಶವು ಯಾವಾಗಲೂ ಹೆಚ್ಚಿನ ಜನಸಾಂದ್ರತೆಯನ್ನು ಹೊಂದಿರುತ್ತದೆ, ಆದ್ದರಿಂದ ಅಲ್ಲಿ ಮೊದಲು ಕಾರ್ಯಗಳನ್ನು ಕೈಗೊಳ್ಳುವುದರಿಂದ ಹೆಚ್ಚಿನ ಸಂಖ್ಯೆಯ ಜನರಿಗೆ ಪ್ರಯೋಜನವಾಗುತ್ತದೆ.

D) ಏಕೆಂದರೆ ಜಲಾನಯನ ಪ್ರದೇಶ ಕಾರ್ಯಕ್ರಮಗಳ ಅಡಿಯಲ್ಲಿ ಕೇಂದ್ರದ ಅನುದಾನವು ಕೇವಲ ಬೆಟ್ಟದ ತುದಿಯ ಪ್ರದೇಶದ ಕೆಲಸಗಳಿಗೆ ಮಾತ್ರ ಬಿಡುಗಡೆಯಾಗುತ್ತದೆ ಮತ್ತು ಕಣಿವೆಯ ಪ್ರದೇಶದ ಕೆಲಸಗಳಿಗೆ ಸಂಪೂರ್ಣವಾಗಿ ರಾಜ್ಯ ಸರ್ಕಾರವೇ ಹಣಕಾಸು ಒದಗಿಸಬೇಕಾಗುತ್ತದೆ.

30. Between 2019 and 2020, Parliament consolidated 29 existing Central Labour Laws into four Labour Codes (on Wages ; Industrial Relations ; Social Security ; and Occupational Safety, Health and Working Conditions). Which of the following best explains the primary administrative rationale offered for this consolidation ?
   A) To abolish all statutory protections previously available to workers under the earlier labour laws.
   B) To transfer the entire subject of labour regulation from the Concurrent List to the Union List, removing any role for State Governments.
   C) To remove judicial review of labour disputes entirely and replace it with compulsory private arbitration in all cases.
   D) To simplify and harmonize overlapping and sometimes inconsistent definitions and compliance requirements spread across a large number of separate enactments, thereby easing compliance while consolidating labour rights under fewer, more coherent statutes.

31. Non-contributory old-age and welfare pensions disbursed by the State, such as those administered through Kerala's social security pension schemes, are best classified administratively as which of the following, and on which Constitutional basis are such measures generally justified ?
   A) They are a form of social insurance, funded entirely by employee and employer contributions, and are justified under Article 21 alone.
   B) They are a form of social assistance, funded from general State revenues without any contribution from the beneficiary, and are generally justified with reference to the Directive Principles of State Policy, such as Article 41.
   C) They are a form of compulsory private insurance that citizens are legally required to purchase, justified under the Fundamental Duties in Article 51A.
   D) They are a form of taxation, and their primary Constitutional basis lies in the Union's power to levy cesses under Article 270.

32. Under the Maintenance and Welfare of Parents and Senior Citizens Act, 2007, a Maintenance Tribunal is empowered to order a person's children or relatives to pay a monthly allowance for the maintenance of a senior citizen or parent unable to maintain themselves. Which of the following best describes the nature of the proceedings before such a Tribunal ?
   A) The proceedings are purely criminal in nature, and any failure to pay the ordered maintenance is punishable only by a fine, with no provision for imprisonment.
   B) The Tribunal follows the complete procedure of the Code of Civil Procedure, 1908, in every respect, exactly as a Civil Court would in an ordinary civil suit.
   C) The proceedings are designed to be summary in nature, enabling a relatively simple and speedy inquiry and disposal, so that an elderly applicant is not subjected to the delays of ordinary civil litigation.
   D) The Tribunal has no power to grant any interim relief, and can only pass a final order for maintenance after the entire inquiry is concluded.

30. 2019 ಮತ್ತು 2020 ರ ನಡುವೆ, ಸಂಸತ್ತು ಅಸ್ತಿತ್ವದಲ್ಲಿದ್ದ 29 ಕೇಂದ್ರ ಕಾರ್ಮಿಕ ಕಾಯ್ದೆಗಳನ್ನು ನಾಲ್ಕು ಕಾರ್ಮಿಕ ಸಂಹಿತೆಗಳಾಗಿ (ವೇತನ; ಕೈಗಾರಿಕಾ ಸಂಬಂಧಗಳು; ಸಾಮಾಜಿಕ ಭದ್ರತೆ; ಮತ್ತು ವೃತ್ತಿಪರ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳು) ಕ್ರೋಡೀಕರಿಸಿತು. ಈ ಕ್ರೋಡೀಕರಣಕ್ಕೆ ನೀಡಲಾದ ಮುಖ್ಯ ಆಡಳಿತಾತ್ಮಕ ತಾರ್ಕಿಕತೆಯನ್ನು ಕೆಳಗಿನವುಗಳಲ್ಲಿ ಯಾವುದು ಅತ್ಯುತ್ತಮವಾಗಿ ವಿವರಿಸುತ್ತದೆ ?

A) ಹಿಂದಿನ ಕಾರ್ಮಿಕ ಕಾಯ್ದೆಗಳ ಅಡಿಯಲ್ಲಿ ಕಾರ್ಮಿಕರಿಗೆ ಲಭ್ಯವಿದ್ದ ಎಲ್ಲಾ ಶಾಸನಬದ್ಧ ರಕ್ಷಣೆಗಳನ್ನು ರದ್ದುಗೊಳಿಸುವುದು.

B) ರಾಜ್ಯ ಸರ್ಕಾರಗಳ ಯಾವುದೇ ಪಾತ್ರವನ್ನು ತೆಗೆದುಹಾಕುವ ಮೂಲಕ ಕಾರ್ಮಿಕ ನಿಯಂತ್ರಣದ ಸಂಪೂರ್ಣ ವಿಷಯವನ್ನು ಸಮವರ್ತಿ ಪಟ್ಟಿಯಿಂದ ಕೇಂದ್ರ ಪಟ್ಟಿಗೆ ವರ್ಗಾಯಿಸುವುದು.

C) ಕಾರ್ಮಿಕ ವಿವಾದಗಳ ನ್ಯಾಯಾಂಗ ವಿಮರ್ಶೆಯನ್ನು ಸಂಪೂರ್ಣವಾಗಿ ತೆಗೆದುಹಾಕುವುದು ಮತ್ತು ಎಲ್ಲಾ ಪ್ರಕರಣಗಳಲ್ಲಿ ಅದರ ಬದಲಿಗೆ ಕಡ್ಡಾಯ ಖಾಸಗಿ ಮಧ್ಯಸ್ಥಿಕೆಯನ್ನು ತರುವುದು.

D) ಹೆಚ್ಚಿನ ಸಂಖ್ಯೆಯ ಪ್ರತ್ಯೇಕ ಶಾಸನಗಳಲ್ಲಿ ಹರಡಿರುವ ಪರಸ್ಪರ ಅತಿಕ್ರಮಿಸುವ ಮತ್ತು ಕೆಲವೊಮ್ಮೆ ಅಸಂಗತವಾಗಿರುವ ವ್ಯಾಖ್ಯಾನಗಳು ಹಾಗೂ ಬದ್ಧತೆ (ನಿಯಮ ಪಾಲನೆ) ಅಗತ್ಯತೆಗಳನ್ನು ಸರಳೀಕರಿಸಲು ಮತ್ತು ಸಾಮರಸ್ಯಗೊಳಿಸಲು, ಆ ಮೂಲಕ ಕಾರ್ಮಿಕರ ಹಕ್ಕುಗಳನ್ನು ಕಡಿಮೆ ಮತ್ತು ಹೆಚ್ಚು ಸುಸಂಬದ್ಧವಾದ ಶಾಸನಗಳ ಅಡಿಯಲ್ಲಿ ಕ್ರೋಡೀಕರಿಸುವ ಜೊತೆಗೆ ನಿಯಮಗಳ ಪಾಲನೆಯನ್ನು ಸುಲಭಗೊಳಿಸಲು.

31. ಕೇರಳದ ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳ ಮೂಲಕ ನಿರ್ವಹಿಸಲ್ಪಡುವಂತಹ, ರಾಜ್ಯವು ವಿತರಿಸುವ ಅಂಶದಾನವಿಲ್ಲದ ವೃದ್ಧಾಪ್ಯ ಮತ್ತು ಕಲ್ಯಾಣ ಪಿಂಚಣಿಗಳನ್ನು ಆಡಳಿತಾತ್ಮಕವಾಗಿ ಕೆಳಗಿನವುಗಳಲ್ಲಿ ಹೇಗೆ ಅತ್ಯುತ್ತಮವಾಗಿ ವರ್ಗೀಕರಿಸಲಾಗುತ್ತದೆ ಮತ್ತು ಇಂತಹ ಕ್ರಮಗಳನ್ನು ಸಾಮಾನ್ಯವಾಗಿ ಯಾವ ಸಾಂವಿಧಾನಿಕ ಆಧಾರದ ಮೇಲೆ ಸಮರ್ಥಿಸಲಾಗುತ್ತದೆ ?

A) ಇವು ಸಾಮಾಜಿಕ ವಿಮೆಯ ರೂಪವಾಗಿದ್ದು, ಸಂಪೂರ್ಣವಾಗಿ ಉದ್ಯೋಗಿ ಮತ್ತು ಉದ್ಯೋಗದಾತರ ಅಂಶದಾನದಿಂದ ಹಣಕಾಸು ಪಡೆಯುತ್ತವೆ ಹಾಗೂ ವಿಧಿ 21ರ ಅಡಿಯಲ್ಲಿ ಮಾತ್ರ ಸಮರ್ಥಿಸಲ್ಪಡುತ್ತವೆ.

B) ಇವು ಸಾಮಾಜಿಕ ನೆರವಿನ ರೂಪವಾಗಿದ್ದು, ಫಲಾನುಭವಿಯಿಂದ ಯಾವುದೇ ಅಂಶದಾನವಿಲ್ಲದೆ ರಾಜ್ಯದ ಸಾಮಾನ್ಯ ಕಂದಾಯದಿಂದ ಹಣಕಾಸು ಪಡೆಯುತ್ತವೆ ಮತ್ತು ಸಾಮಾನ್ಯವಾಗಿ ವಿಧಿ 41ರಂತಹ ರಾಜ್ಯ ನೀತಿ ನಿರ್ದೇಶಕ ತತ್ವಗಳ ಉಲ್ಲೇಖದೊಂದಿಗೆ ಸಮರ್ಥಿಸಲ್ಪಡುತ್ತವೆ.

C) ಇವು ಕಡ್ಡಾಯ ಖಾಸಗಿ ವಿಮೆಯ ರೂಪವಾಗಿದ್ದು, ನಾಗರಿಕರು ಇದನ್ನು ಖರೀದಿಸಲು ಕಾನೂನುಬದ್ಧವಾಗಿ ಬದ್ಧರಾಗಿರುತ್ತಾರೆ ಹಾಗೂ ವಿಧಿ 51Aಯಲ್ಲಿನ ಮೂಲಭೂತ ಕರ್ತವ್ಯಗಳ ಅಡಿಯಲ್ಲಿ ಸಮರ್ಥಿಸಲ್ಪಡುತ್ತವೆ.

D) ಇವು ತೆರಿಗೆಯ ರೂಪವಾಗಿದ್ದು, ಇವುಗಳ ಪ್ರಾಥಮಿಕ ಸಾಂವಿಧಾನಿಕ ಆಧಾರವು ವಿಧಿ 270ರ ಅಡಿಯಲ್ಲಿ ಸೆಸ್‌ಗಳನ್ನು ವಿಧಿಸುವ ಕೇಂದ್ರದ ಅಧಿಕಾರದಲ್ಲಿದೆ.

32. ಪೋಷಕರು ಮತ್ತು ಹಿರಿಯ ನಾಗರಿಕರ ಪೋಷಣೆ ಮತ್ತು ಕಲ್ಯಾಣ ಕಾಯಿದೆ, 2007 ರ ಅಡಿಯಲ್ಲಿ, ತಮ್ಮನ್ನು ತಾವು ಪೋಷಿಸಿಕೊಳ್ಳಲು ಸಾಧ್ಯವಾಗದ ಹಿರಿಯ ನಾಗರಿಕ ಅಥವಾ ಪೋಷಕರ ನಿರ್ವಹಣೆಗಾಗಿ ಮಾಸಿಕ ಭತ್ಯೆಯನ್ನು ನೀಡುವಂತೆ ಅವರ ಮಕ್ಕಳಿಗೆ ಅಥವಾ ಸಂಬಂಧಿಕರಿಗೆ ಆದೇಶಿಸಲು ನಿರ್ವಹಣಾ ನ್ಯಾಯಾಧಿಕಾರಕ್ಕೆ (Maintenance Tribunal) ಅಧಿಕಾರ ನೀಡಲಾಗಿದೆ. ಇಂತಹ ನ್ಯಾಯಾಧಿಕಾರದ ಮುಂಭಾಗದ ನಡಾವಳಿಗಳ ಸ್ವಭಾವವನ್ನು (Nature of proceedings) ಕೆಳಗಿನವುಗಳಲ್ಲಿ ಯಾವುದು ಅತ್ಯುತ್ತಮವಾಗಿ ವಿವರಿಸುತ್ತದೆ ?

A) ಈ ನಡಾವಳಿಗಳು ಸಂಪೂರ್ಣವಾಗಿ ಕ್ರಿಮಿನಲ್ (ಅಪರಾಧ ನಿಯಮಾವಳಿ) ಸ್ವರೂಪದ್ದಾಗಿರುತ್ತವೆ, ಮತ್ತು ಆದೇಶಿಸಿದ ಜೀವನಾಂಶವನ್ನು ಪಾವತಿಸಲು ವಿಫಲವಾದರೆ ದಂಡದಿಂದ ಮಾತ್ರ ಶಿಕ್ಷಿಸಬಹುದಾಗಿದ್ದು, ಜೈಲು ಶಿಕ್ಷೆಗೆ ಯಾವುದೇ ಅವಕಾಶವಿಲ್ಲ.

B) ಟ್ರಿಬ್ಯೂನಲ್ ಪ್ರತಿಯೊಂದು ವಿಷಯದಲ್ಲೂ ಸಾಧಾರಣ ಸಿವಿಲ್ ದಾವೆಯಲ್ಲಿ ಸಿವಿಲ್ ನ್ಯಾಯಾಲಯವು ಅನುಸರಿಸುವಂತೆಯೇ ಸಿವಿಲ್ ಪ್ರೊಸಿಜರ್ ಕೋಡ್, 1908ರ ಸಂಪೂರ್ಣ ವಿಧಾನವನ್ನು ಅನುಸರಿಸುತ್ತದೆ.

C) ನಡಾವಳಿಗಳನ್ನು ಸಂಕ್ಷಿಪ್ತ ಸ್ವರೂಪದಲ್ಲಿ (Summary in nature) ವಿನ್ಯಾಸಗೊಳಿಸಲಾಗಿದ್ದು, ತುಲನಾತ್ಮಕವಾಗಿ ಸರಳ ಮತ್ತು ಶೀಘ್ರ ವಿಚಾರಣೆ ಹಾಗೂ ವಿಲೇವಾರಿಗೆ ಅವಕಾಶ ನೀಡುತ್ತದೆ, ಇದರಿಂದಾಗಿ ಹಿರಿಯ ಅರ್ಜಿದಾರರು ಸಾಮಾನ್ಯ ಸಿವಿಲ್ ವ್ಯಾಜ್ಯಗಳ ವಿಳಂಬಕ್ಕೆ ತುತ್ತಾಗುವುದಿಲ್ಲ.

D) ಯಾವುದೇ ಮಧ್ಯಂತರ ಪರಿಹಾರವನ್ನು ನೀಡುವ ಅಧಿಕಾರ ಟ್ರಿಬ್ಯೂನಲ್‌ಗೆ ಇರುವುದಿಲ್ಲ, ಮತ್ತು ಸಂಪೂರ್ಣ ವಿಚಾರಣೆ ಮುಕ್ತಾಯಗೊಂಡ ನಂತರವೇ ಜೀವನಾಂಶಕ್ಕಾಗಿ ಅಂತಿಮ ಆದೇಶವನ್ನು ಹೊರಡಿಸಬಹುದು.

33. E-governance initiatives are commonly classified according to the relationship between the parties involved in service delivery, such as Government-to-Citizen (G2C), Government-to-Government (G2G), Government-to-Business (G2B), and Government-to-Employee (G2E). An online portal through which a State's Treasury Department electronically transfers pension and salary-related data directly to the Accountant General's office for audit would best be classified under which category ?
   A) Government-to-Citizen (G2C), since the transaction ultimately benefits an individual pensioner.
   B) Government-to-Business (G2B), since the Accountant General's office functions as a private business entity.
   C) Government-to-Employee (G2E), since the transaction concerns salary data.
   D) Government-to-Government (G2G), since the transaction is an exchange of data and services between two government departments or agencies.

34. A State Government department has, for several years, consistently followed a published policy of granting a specific category of licence renewal automatically upon submission of a renewal application, without further scrutiny, provided the applicant has not been found in default. It now proposes to deviate from this consistent practice for one specific applicant, without prior notice, even though that applicant has not been found in default. Which principle of administrative law is most directly relevant to examining the validity of this proposed deviation ?
   A) The doctrine of legitimate expectation, under which a person may be entitled to a fair hearing or a reasonable justification before a public authority departs, to that person's detriment, from an established and consistent practice or representation.
   B) The doctrine of sovereign immunity, under which the State cannot be compelled to follow any of its own previous administrative practices.
   C) The doctrine of res judicata, under which the department's earlier renewals in other cases operate as a final adjudication binding on all future applicants.
   D) The doctrine of eminent domain, under which the State may deviate from its own policy in the public interest without any procedural safeguard.

